ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 03-06-1971

*ನಿರಂತರ ಯೋಗಯುಕ್ತರಾಗಲು ಕಮಲ ಪುಷ್ಪದ ಅಸನ* (निरन्तर योगयुक्त बनने के लिए कमल पुष्प का आसन)

ಇಂದು ಯಾವ ದಿನ? ಭಟ್ಟಿಯ ದಿನವಾಗಿದೆ. ಭಟ್ಟಿಯ ದಿನವನ್ನು ಯಾವ ದಿನವೆಂದು ಹೇಳುತ್ತಾರೆ? ಭಟ್ಟಿಯ ಆರಂಭದ ದಿನ ಎಂದರೆ ಜೀವನದ ನಿರ್ಣಯದ ದಿನ. ಭಟ್ಟಿಯಲ್ಲಿ ಏಕೆ ಬರುತ್ತೀರಿ? ಜೀವನದ ಸದಾಕಾಲದ ನಿರ್ಣಯ ಮಾಡಲು. ಎಲ್ಲರೂ ಈ ಉದ್ದೇಶದಿಂದ ಬಂದಿರುವಿರಾ? ಏಕೆಂದರೆ ಭಟ್ಟಿಯಲ್ಲಿ ಬಂದಾಗ ಬಾಪ್ ದಾದಾರಿಂದ ಅಥವಾ ಅನನ್ಯ ಮಕ್ಕಳಿಂದ ಒಂದು ಉಡುಗೊರೆ ಸಿಗುತ್ತದೆ. ಅದು ಯಾವುದು? ಯಾವ ವಸ್ತು ಸಿಗುತ್ತದೆಯೋ, ಹೇಳುವುದು ಸಹ ಸಹಜವಾಗಿದೆ. (2-4 ಜನ ತಮ್ಮ ವಿಚಾರವನ್ನು ಹೇಳಿದರು) ಏನೆಲ್ಲಾ ಮಾತುಗಳನ್ನು ಹೇಳಿದಿರೋ ಆ ಎಲ್ಲಾ ಮಾತುಗಳ ಪ್ರಾಪ್ತಿಯ ಆಧಾರ ಯಾವ ಉಡುಗೊರೆಯಾಗಿದೆ? ಅದಾಗಿದೆ ಬುದ್ಧಿಯ ಪರಿವರ್ತನೆ. ರಜೋಗುಣಿ ಅಥವಾ ವ್ಯಕ್ತ ಭಾವದ ಬುದ್ಧಿಯಿಂದ ಬದಲಾಗಿ ಸತೋಗುಣಿ, ಅವ್ಯಕ್ತ ಭಾವದ ದಿವ್ಯ ಬುದ್ಧಿಯವರಾಗುವುದು. ಆ ದಿವ್ಯ ಬುದ್ಧಿಯ ಪ್ರಾಪ್ತಿಯಿಂದಲೇ ಅವ್ಯಕ್ತ ಸ್ಥಿತಿ ಅಥವಾ ಯೋಗಯುಕ್ತ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು. ಹಾಗಾದರೆ ಯಾವ ಉಡುಗೊರೆಯಾಯಿತು? "ದಿವ್ಯ ಸತೋಗುಣಿ ಬುದ್ಧಿ", ಬುದ್ಧಿಯ ಪರಿವರ್ತನೆಯಿಂದಲೇ ಜೀವನದ ಪರಿವರ್ತನೆಯಾಗುತ್ತದೆ. ದಿವ್ಯ ಬುದ್ಧಿಯ ಉಡುಗೊರೆ ವಿಶೇಷ ಭಟ್ಟಿಯಲ್ಲಿ ಪ್ರಾಪ್ತಿಯಾಗುತ್ತದೆ. ಈಗ ಈ ಉಡುಗೊರೆಯನ್ನು ಉಪಯೋಗಿಸುವುದು ಅಥವಾ ಸದಾಕಾಲಕ್ಕೆ ಕಾಯಂ ಇಟ್ಟುಕೊಳ್ಳುವುದು ತಮ್ಮ ಕೈಯಲ್ಲಿದೆ. ಆದರೆ ಉಡುಗೊರೆ ಎಲ್ಲರಿಗೂ ಪ್ರಾಪ್ತಿಯಾಗುತ್ತದೆ.

ಭಟ್ಟಿಯಲ್ಲಿ ಬಂದವರೆಲ್ಲಾ ದಿವ್ಯ ಸತೋಗುಣಿ ಬುದ್ಧಿಯ ಉಡುಗೊರೆಯಿಂದ ತಮ್ಮನ್ನು ಬಹಳ ಸಹಜ ಮತ್ತು ಬೇಗನೆ ಪರಿವರ್ತನೆಯಲ್ಲಿ ತರಬಹುದು. ಆದ್ದರಿಂದ ಈ ದಿನ ಜೀವನ ಪರಿವರ್ತನೆಯಾಗುವ ದಿನ, ಹಾಗಾದರೆ ಇಂದು ಪ್ರಾಪ್ತಿಯಾಗುವ ಉಡುಗೊರೆಯನ್ನು ಧಾರಣೆ ಮಾಡುತ್ತಿರಿ. ಜ್ಞಾನವನ್ನು ಕೇಳುತ್ತಲೇ ಇರುತ್ತೀರಿ, ಆದರೆ ಭಟ್ಟಿಯಲ್ಲಿ ಏನು ಮಾಡಲು ಬರುತ್ತೀರಿ? ಜ್ಞಾನಸ್ವರೂಪರಾಗಲು ಬರುತ್ತೀರಿ. ಯೋಗದ ಬಗ್ಗೆ ತಿಳಿಯುವ ಅಥವಾ ಯೋಗದ ಅಭ್ಯಾಸವನ್ನೂ ಮಾಡುತ್ತಲಿರುವಿರಿ, ಆದರೆ ಸದಾ ಯೋಗಯುಕ್ತರಾಗಿರುವ ಪಾಠವನ್ನು ಪಕ್ಕಾ ಮಾಡಿಕೊಳ್ಳಲು ಭಟ್ಟಿಯಲ್ಲಿ ಬರುತ್ತೀರಿ. ನಿರಂತರ ಯೋಗಯುಕ್ತರಾಗಲು ಯಾವ ಸಹಜ ಯುಕ್ತಿ ಭಟ್ಟಿಯಿಂದ ಪ್ರಾಪ್ತಿಮಾಡಿಕೊಳ್ಳಬೇಕು? ಹಠ ಅಥವಾ ತಪಸ್ಸು ಮಾಡುವಂತಹ ಹಠಯೋಗಿಗಳು ತಪಸ್ಸು ಮಾಡುವಾಗ ಆಸನದ ಮೇಲೆ ಕುಳಿತುಕೊಳ್ಳುತ್ತಾರೆ. ಭಿನ್ನ ಭಿನ್ನ ಆಸನಗಳಿರುತ್ತವೆ. ಸದಾ ಯೋಗಯುಕ್ತರಾಗಲು ತಮಗೆ ಯಾವ ಆಸನವಿದೆ? ನಿರಂತರ ಯೋಗಯುಕ್ತ ಅವಸ್ಥೆ ಸಹಜವಾಗಿರಲು ಬಾಪ್ ದಾದಾ ಸಹಜ ಆಸನವನ್ನು ಹೇಳುತ್ತಿದ್ದಾರೆ. ಅದಾಗಿದೆ ಕಮಲ ಪುಷ್ಪದ ಆಸನ, ಕಮಲಾಸನ ಎಂದು ಹೇಳುತ್ತೀರಲ್ಲವೇ? ಚಿತ್ರದಲ್ಲಿ ದೇವತೆಗಳನ್ನು ಯಾವುದರ ಮೇಲೆ ನಿಂತ ಅಥವಾ ಕುಳಿತದ್ದನ್ನು ತೋರಿಸುತ್ತೀರಿ? ಕಮಲದ ಮೇಲೆ. ಆದ್ದರಿಂದ ಕರ್ಮ ಮಾಡುತ್ತಲಿದ್ದರೂ ಸಹಜ ಯೋಗಯುಕ್ತರಾಗಲು ಸದಾ ಕಮಲ+ಆಸನ ಅರ್ಥಾತ್ ತಮ್ಮ ಸ್ಥಿತಿ ಕಮಲ ಪುಷ್ಪದ ಸಮಾನ ಇಟ್ಟುಕೊಂಡರೆ ನಿರಂತರ ಯೋಗಯುಕ್ತರಾಗುವಿರಿ. ಆದರೆ ಕಮಲದ ಪುಷ್ಪವಾಗಿ ಈ ಆಸನದ ಮೇಲೆ ಈ ಸ್ಥಿತಿಯಲ್ಲಿರಲು ಏನು ಮಾಡಬೇಕು? ತಮ್ಮನ್ನು ಲೈಟ್ ಮಾಡಿಕೊಳ್ಳಬೇಕು. ಹಗುರ ಮತ್ತು ಪ್ರಕಾಶ ಸ್ವರೂಪವಾಗಬೇಕು. ಕಮಲದ ಪುಷ್ಪ ಎಷ್ಟು ಜ್ಞಾನಯುಕ್ತವಾಗಿದೆ. ಅದನ್ನು ನೋಡುತ್ತಲೇ ಜ್ಞಾನದ ಸ್ಮೃತಿ ಬರುತ್ತದೆ. ಹಾಗಾದರೆ ಕಮಲಾಸನದ ಮೇಲೆ ವಿರಾಜಮಾನರಾಗುವುದರಿಂದ ಸದಾ ಯೋಗಯುಕ್ತರಾಗುವಿರಿ. ಆಸನವನ್ನು ಎಂದೂ ಬಿಡಬೇಡಿ. ಈ ಕಮಲ ಪುಷ್ಪ ಸಮಾನ ಸ್ಥಿತಿಯ ಆಸನ ಸದಾ ಕಾಯಂ ಇಟ್ಟುಕೊಳ್ಳುವುದು ಎಂದರೆ ಇದರ ಮೇಲೆ ಸದಾ ಸ್ಥಿತರಾಗುವುದು. ಆಗ ಭವಿಷ್ಯದಲ್ಲಿಯೂ ರಾಜ್ಯ-ಸಿಂಹಾಸನ ಇಷ್ಟೇ ಸಮಯ ಕಾಯಂ ಇರುವುದು. ಈ ಆಸನದ ಮೇಲೆ ಕುಳಿತುಕೊಳ್ಳದಿದ್ದರೆ, ಈ ಸ್ಥಿತಿಯಲ್ಲಿ ಸ್ಥಿತರಾಗದಿದ್ದರೆ ಸಿಂಹಾಸನವನ್ನು ಪ್ರಾಪ್ತಿ ಮಾಡಿಕೊಳ್ಳಲಾರಿರಿ. ಆದ್ದರಿಂದ ರಾಜ- ಸಿಂಹಾಸನವನ್ನು ಪ್ರಾಪ್ತಿ ಮಾಡಿಕೊಳ್ಳಲು ಮೊದಲು

ಕಮಲ-ಆಸನದ ಮೇಲೆ ಸ್ಥಿತರಾಗುವ ಅಭ್ಯಾಸ ಮಾಡಬೇಕು. ಭಟ್ಟಿಯಲ್ಲಿ ತಮ್ಮನ್ನು ಎಲ್ಲಾ ಪ್ರಕಾರದ ಬಂಧನದಿಂದ ಮುಕ್ತ ಮಾಡಿಕೊಂಡು ಹಗುರರಾಗಲು ಅಥವಾ ಸದಾ ಕಮಲ ಪುಷ್ಪದ ಸ್ಥಿತಿಯಲ್ಲಿ ಸ್ಥಿತರಾಗುವ ಆಸನದ ಮೇಲೆ ವಿರಾಜಮಾನರಾಗುವ ಅಭ್ಯಾಸವನ್ನು ಕಲಿಯಲು ಬಂದಿರುವಿರಿ, ಏನೇ ಹೊರೆಯಿರಲಿ ಅದೆಲ್ಲಾ ಭಾರವನ್ನು ಭಟ್ಟಿಯಲ್ಲಿ ನಾಶ ಮಾಡಿಕೊಂಡು ಹೋಗಿ, ಮನಸ್ಸಿನ ಸಂಕಲ್ಪದ ಹೊರೆಯಾಗಿರಲಿ, ಸಂಸ್ಕಾರಗಳ ಹೊರೆಯಾಗಿರಲಿ, ಜಗತ್ತಿನ ಯಾವುದೇ ವಿನಾಶಿ ವಸ್ತುಗಳ ಪ್ರತಿ ಆಕರ್ಷಣೆಯ ಹೊರೆಯಾಗಿರಲಿ, ಲೌಕಿಕ ಸಂಬಂಧಿಕರ ಪ್ರತಿ ಮಮತೆಯ ಹೊರೆಯಾಗಿರಲಿ, ಎಲ್ಲಾ ಪ್ರಕಾರದ ಹೊರೆ ಅಥವಾ ಬಂಧನವೆನ್ನಿ, ಅವೆಲ್ಲವನ್ನು ನಾಶ ಮಾಡಲು ಭಟ್ಟಿಯಲ್ಲಿ ಬಂದಿರುವಿರಿ. ಈಗ ತಮ್ಮ ಜೀವನದ ಉನ್ನತಿಯ ಸುವರ್ಣಾವಕಾಶ ಈ ಭಟ್ಟಿಯಾಗಿದೆ. ಈ ಅವಕಾಶದಲ್ಲಿ ಯಾರು ಎಷ್ಟು ಅವಕಾಶಗಳನ್ನು ಪಡೆಯುವಿರೋ ಅಷ್ಟೇ ಸದಾಕಾಲಕ್ಕಾಗಿ ತಮ್ಮ ಜೀವನವನ್ನು ಮುಂದುವರೆಸಿಕೊಂಡು ಹೋಗುವಿರಿ. ಭಟ್ಟಿಯಲ್ಲಿ ಯಾವ ಉದ್ದೇಶವನ್ನು ಇಟ್ಟುಕೊಂಡು ಬಂದಿರುವಿರಿ? ಸಂಸ್ಕಾರಗಳನ್ನು ಪರಿವರ್ತನೆ ಮಾಡಿಕೊಂಡು ಏನಾಗುವ ಉದ್ದೇಶವಿದೆ? ಈ ಗುಂಪು ವಿಶೇಷ ಯಾವ ಮಾತಿನಲ್ಲಿ ಎಲ್ಲಾ ಗುಂಪುಗಳಿಗಿಂತ ಚೆನ್ನಾಗಿದೆ, ಇದು ಗೊತ್ತಿದೆಯಾ? ಈ ಗುಂಪಿನ ಒಂದು ಒಳ್ಳೆಯ ವಿಶೇಷತೆಯಿದೆ. ಚಿನ್ನದಲ್ಲಿ ಯಾವುದೇ ವಸ್ತುವಿನ ಮಿಶ್ರಣವಾದಾಗ ಮತ್ತೆ ಆ ಚಿನ್ನವನ್ನು ಮೌಲ್ಡ್ ಮಾಡಲಾಗುವುದಿಲ್ಲ. ಅಪ್ಪಟ ಚಿನ್ನವಿದ್ದರೆ ಮಾತ್ರ ಅದನ್ನು ಮೌಲ್ಡ್ ಮಾಡಬಹುದು. ಆದ್ದರಿಂದ ನಾವು ಯಾವ ಮಿಶ್ರಣವಿರದ ಅಪ್ಪಟ ಚಿನ್ನವಾಗಿದ್ದೇವೆ ಎಂದು ತಿಳಿದುಕೊಳ್ಳಿ. ತಾವು ತಮ್ಮ ವಿಶೇಷತೆಯನ್ನು ತಿಳಿದಿದ್ದೀರಾ? ಹೊಸ ಗಿಡವನ್ನು ನೆಟ್ಟಾಗ ಮೊದಲು ಬಹಳ ಕೋಮಲ, ಸುಂದರ, ಚಿಕ್ಕಚಿಕ್ಕ ಎಲೆಗಳು ಬರುತ್ತವೆ, ಅವು ಎಲ್ಲರಿಗೂ ಪ್ರಿಯವೆನಿಸುತ್ತವೆ, ಈ ಗುಂಪನ್ನು ನೋಡಿದಾಗ ಹೊಸ ಎಲೆಗಳು ಆದರೆ ಕೋಮಲವಾಗಿವೆ ಎಂದೆನಿಸುತ್ತದೆ. ಕೋಮಲ ಮತ್ತು ಗಟ್ಟಿ ವಸ್ತುಗಳಿರುತ್ತವಲ್ಲವೇ? ಕೋಮಲ ಎಂದರೆ ಸಂಸ್ಕಾರದ ಎಲುಬುಗಳು ಪರಿವರ್ತನೆಯಾಗದಿರುವಷ್ಟು ಗಟ್ಟಿಯಾಗಿಲ್ಲ. ಚಿಕ್ಕ ಮಕ್ಕಳ ಎಲುಬುಗಳು ಮೊದಲು ಕೋಮಲವಾಗಿರುತ್ತವೆ, ವಯಸ್ಸಾದಂತೆ ಗಟ್ಟಿಯಾಗುತ್ತವೆ. ಈ ಗುಂಪೂ ಕೋಮಲ ಸಂಸ್ಕಾರದವರದಾಗಿದೆ. ಈ ಸಂಸ್ಕಾರಗಳನ್ನು ಪರಿವರ್ತನೆ ಮಾಡುವುದು ಸಹಜವಾಗುವುದು, ಕಠಿಣ ಸಂಸ್ಕಾರದವರಲ್ಲವಷ್ಟೇ?

(ದಾದೀಜಿ ಎರಡುದಿನಗಳಿಗಾಗಿ ಮದ್ರಾಸ್ ಸೇವಗೆ ಹೋಗಲು ಬಾಪ್ ದಾದಾರಿಂದ ಅನುಮತಿ ತೆಗೆದುಕೊಳ್ಳುತ್ತಿದ್ದಾರೆ)

ವಿಶ್ವ ಮಹಾರಾಜರಾಗುವವರ ವಿಶೇಷತೆಯಾಗಿದೆ - ಎಲ್ಲಾ ಆತ್ಮರನ್ನು ರಾಜ ಮಾಡುವುದು. ಮಹಾರಥಿಗಳ ಹೆಜ್ಜೆಹೆಜ್ಜೆಯಲ್ಲಿ ಪದಮಗಳಷ್ಟು ಸಂಪಾದನೆಯಿರುತ್ತದೆ. (ಸೀತಾ ಮಾತಾ ಸಹ ಅನುಮತಿ ಪಡೆಯುತ್ತಿದ್ದಾರೆ) ತಮ್ಮನ್ನು ಸಮರ್ಥ ಆತ್ಮ ಎಂದು ತಿಳಿದು ಈ ಶರೀರವನ್ನು ನೋಡುತ್ತಿರುವಿರಾ? ಸಾಕ್ಷಿ ಅವಸ್ಥೆಯ ಸ್ಥಿತಿಯಲ್ಲಿ ಸ್ಥಿತರಾಗುವುದರಿಂದ ಶಕ್ತಿ ಸಿಗುತ್ತದೆ. ಯಾರಾದರೂ ದುರ್ಬಲರಿದ್ದರೆ ಅವರಿಗೆ ಶಕ್ತಿ ಬರಲು ಗ್ಲುಕೋಸ್ ಕೊಡುತ್ತಾರೆ. ಹಾಗಾದರೆ ತಮ್ಮನ್ನು ಶರೀರದಿಂದ ಭಿನ್ನ ಅಶರೀರಿ ಆತ್ಮ ಎಂದು ತಿಳಿದಾಗ ಈ ಸಾಕ್ಷಿ ಸ್ಥಿತಿ ಶಕ್ತಿ ತುಂಬುವ ಕೆಲಸ ಮಾಡುತ್ತದೆ ಮತ್ತು ಎಷ್ಟು ಸಮಯ ಸಾಕ್ಷಿ ಸ್ಥಿತಿಯಿರುತ್ತದೆಯೋ ಅಷ್ಟು ತಂದೆ ಜೊತೆಗಾರನ ನೆನಪು ಇರುತ್ತದೆ ಎಂದರೆ ಜೊತೆಗಿರುತ್ತಾರೆ. ಆದ್ದರಿಂದ ಸಾಕ್ಷಿಯಾಗಿದ್ದಾರೆ. ಒಂದು ಸಾಕ್ಷಿತನದ ಶಕ್ತಿ, ಇನ್ನೊಂದು ತಂದೆಯ ಜೊತೆಗಾರನಾದ ಖುಷಿಯ ಟಾನಿಕ್. ಆಗ ಹೇಳಿ ಏನಾಗುತ್ತದೆ? ನಿರೋಗಿ. ಶಕ್ತಿರೂಪವು ಅತೀತ ಮತ್ತು ಪ್ರಿಯವಾಗಿದೆ. ಈ ಸಮಯ ಇಂತಹ ಸ್ಥಿತಿಯಲ್ಲಿ ಸ್ಥಿತರಾಗಿರುವಿರಾ? ವೈದ್ಯರು ಕಿರಣಗಳನ್ನು ಬಿಟ್ಟು ಕೀಟಾಣುಗಳನ್ನು ಕೊಲ್ಲುತ್ತಾರೆ. ಈ ಸ್ಥಿತಿಯೂ ಅದೇ ರೀತಿ ಒಂದು ಕ್ಷಣದಲ್ಲಿ ಅನೇಕ ವಿಕರ್ಮ ರೂಪಿ ಕೀಟಾಣು ಭಸ್ಮ ಮಾಡುವಷ್ಟು ಶಕ್ತಿಶಾಲಿಯಾಗಿದೆ. ವಿಕರ್ಮಗಳು ಭಸ್ಮವಾದರೆ ಆಗ ತಮ್ಮನ್ನು ಹಗುರ ಮತ್ತು ಶಕ್ತಿಶಾಲಿ ಅನುಭವ ಮಾಡುವಿರಿ, ಸದಾ ಪ್ರವೃತ್ತಿಯನ್ನೂ ಸೇವಾ ಭೂಮಿಯೆಂದು ತಿಳಿಯಿರಿ. ತಮ್ಮನ್ನು ತಂದೆಯ ಅತಿ ಪ್ರಿಯ ಎಂದು ತಿಳಿಯುತ್ತೀರಾ? ಏಕೆ? ಅತಿ ಪ್ರಿಯರಾಗುವಂತಹ ಯಾವ ವಿಶೇಷತೆಯಿದೆ? ಒಬ್ಬ ತಂದೆಯ ಹೊರತು ಇನ್ನಾರೂ ಇಲ್ಲ. ಈ ರೀತಿ ಒಬ್ಬನ ನೆನಪಿನಲ್ಲಿರುವ ತಂದೆಯ ಅತಿ ಪ್ರಿಯರಾಗಿದ್ದೀರಿ, ತಿಳಿಯಿತೇ?

ಅವ್ಯಕ್ತ ಮುರಳಿ 03-06-1971

***ನಿರಂತರ ಯೋಗಯುಕ್ತರಾಗಲು ಕಮಲ ಪುಷ್ಪ ಆಸನ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಭಟ್ಟಿಯಲ್ಲಿ ಸದಾಕಾಲಕ್ಕಾಗಿ ಜೀವನವನ್ನು ನಿರ್ಣಯಿಸುವ ಉದ್ದೇಶವನ್ನು ಇಟ್ಟುಕೊಂಡಿದ್ದೇನೆ.

2. ನಾನು ಪರಮಾತ್ಮನಿಂದ ರಜೋಗುಣಿ ಅಥವಾ ವ್ಯಕ್ತ ಭಾವದ ಬುದ್ಧಿ ಪರಿವರ್ತನೆಯಾಗಿ ಸತೋಗುಣಿ ಅವ್ಯಕ್ತ ಭಾವದ ದಿವ್ಯ ಬುದ್ಧಿಯೆಂಬ ಬಹುಮಾನವನ್ನು ಪಡೆದಿದ್ದೇನೆ.

3. ನಾನು ಭಟ್ಟಿಯಲ್ಲಿ ಜ್ಞಾನ ಸ್ವರೂಪ ಮತ್ತು ಯೋಗಯುಕ್ತವಾಗುವ ಪಾಠವನ್ನು ಪಕ್ಕಾ ಮಾಡಿಕೊಂಡಿದ್ದೇನೆ.

4. ನಾನು ನಿರಂತರ ಯೋಗಯುಕ್ತವಾಗಲು ಕಮಲ ಪುಷ್ಪ ಆಸನವನ್ನು ಸಹಜವಾಗಿ ಪ್ರಾಪ್ತಿ ಮಾಡಿಕೊಂಡಿರುವ ಕಮಲಆಸನಧಾರಿ ಆಗಿದ್ದೇನೆ.

5. ನಾನು ಕರ್ಮವನ್ನಾಚರಿಸುತ್ತಾ ನನ್ನ ಸ್ಥಿತಿಯನ್ನು ಕಮಲ ಪುಷ್ಪದ ಸಮಾನವಾಗಿಟ್ಟುಕೊಂಡು ಸಹಜವಾಗಿ ನಿರಂತರ ಯೋಗಯುಕ್ತವಾಗಿ ತಯಾರಾಗಿದ್ದೇನೆ.

6. ನಾನು ಲೈಟ್ ಹೌಸ್ಆಗಿ (ಹಗುರತೆ ಮತ್ತು ಪ್ರಕಾಶ) ಸದಾ ಕಮಲ ಪುಷ್ಪಆಸನದ ಮೇಲೆ ಸ್ಥಿರವಾಗಿ ವಿರಾಜಮಾನವಾಗಿ ಭವಿಷ್ಯತ್ತಿನಲ್ಲಿ ರಾಜ್ಯಸಿಂಹಾಸನದ ಅಧಿಕಾರವನ್ನು ಪಡೆದಿದ್ದೇನೆ.

7. ನಾನು ಸದಾ ಕಮಲ ಪುಷ್ಪ ಆಸನದಲ್ಲಿ ಸ್ಥಿತವಾಗಿ ಸರ್ವ ವಿಧವಾದ ಬಂಧನಗಳನ್ನು (ಮನಸ್ಸಿನ ಹೊರೆ, ಸಂಕಲ್ಪದ ಹೊರೆ, ಸಂಸ್ಕಾರಗಳ ಹೊರೆ, ಪ್ರಪಂಚದಲ್ಲಿರುವ ವಿನಾಶಿ ವಸ್ತುಗಳ ಪ್ರತಿ ಇರುವ ಆಕರ್ಷಣೆಯ ಹೊರೆ, ಲೌಕಿಕ ಸಂಬಂಧಿಕರ ಪ್ರತಿ ಮಮಕಾರದ ಹೊರೆ) ಸಮಾಪ್ತಿ ಮಾಡಿದ್ದೇನೆ.

8. ನಾನು ನನ್ನ ಸಂಸ್ಕಾರಗಳನ್ನು ಸಹಜವಾಗಿ ಪರಿವರ್ತನೆ ಮಾಡಿಕೊಂಡಿದ್ದೇನೆ.

9. ನಾನು ಸರ್ವಾತ್ಮರನ್ನು ರಾಜೀ ಮಾಡಿಕೊಂಡಿರುವ ವಿಶ್ವ ಮಹಾರಾಜನು.

10. ನಾನು ನನ್ನ ಪ್ರತಿ ಹೆಜ್ಜೆಯಲ್ಲಿ ಪದಮಾಪದಮ್ ಸಂಪಾದನೆಯನ್ನು ಮಾಡಿಕೊಂಡಿರುವ ಮಹಾರಥಿಯಾಗಿದ್ದೇನೆ.

11. ನಾನು ಸಾಕ್ಷಿಯ ಶಕ್ತಿ ಮತ್ತು ತಂದೆಯ ಜೊತೆಯ ಸಂತೋಷದ ಟಾನಿಕ್ ಅನ್ನು ಸ್ವೀಕರಿಸಿರುವ ನಿರೋಗಿ.

12. ನನ್ನ ಶಕ್ತಿಶಾಲಿ ಸ್ಥಿತಿಯಿಂದ ಒಂದೇ ಕ್ಷಣದಲ್ಲಿ ಅನೇಕ ವಿಕರ್ಮ ರೂಪಿ ಕಿಟಾಣುಗಳನ್ನು ಭಸ್ಮ ಮಾಡಿ ಹಗುರವಾಗಿ, ಶಕ್ತಿಶಾಲಿಯಾಗಿ ಇದ್ದೇನೆ.